# ವಠಾರದತ್ತ ಶಾಲಾ ಕಾರ್ಯಕ್ರಮ

## ನಮ್ಮ ಶಾಲೆಯ ಹೆಸರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಒಕಳಿ

ಕೋವಿಡ್ -19 ಕಾರಣದಿಂದಾಗಿ ಸೋಂಕು ಹೆಚ್ಚಾಗುವುದನ್ನು ತಡೆಗಟ್ಟಲು ಸರಕಾರ ಶಾಲೆಗಳಿಗೆ ರಜೆ ನೀಡಿತ್ತು. ಇಂಥ ಸಂದರ್ಭದಲ್ಲಿ ಪಾಲಕರು ಮಕ್ಕಳನ್ನು ಕರೆದುಕೊಂಡು ಹೊಲ-ಗದ್ದೆ ಕೆಲಸಗಳಿಗೆ ಹೋಗುವುದು ಸಾಮಾನ್ಯವಾಗಿತ್ತು ಅದರಂತೆ ಕೆಲವು ಮಕ್ಕಳು ಊರಿನ ಪ್ರಮುಖ ರಸ್ತೆಗಳಲ್ಲಿ ಹಾಗೂ ಮೈದಾನಗಳಲ್ಲಿ ಯಾವುದೇ ಸಾಮಾಜಿಕ ದೈಹಿಕ ಅಂತರವನ್ನು ಕಾಯ್ದುಕೊಳ್ಳಲು ಗುಂಪುಗೂಡಿ ಆಟವಾಡುತ್ತಿದ್ದರು. ಇದನ್ನು ನೋಡಿ ನಮಗೆ ತುಂಬಾನೇ ಬೇಜಾರಾಯ್ತು. ನಮ್ಮ ಕೈಯಲ್ಲಿ ಕಲಿಯಬೇಕಿದ್ದ ಈ ಸಣ್ಣ ಮಕ್ಕಳು ಹೊಲಗಳಲ್ಲಿ ಕೆಲಸಕ್ಕೆ ಹೋಗುತ್ತಿದ್ದ ದೃಶ್ಯ ಕಣ್ಣಿಗೆ ಬಿದ್ದಾಗ ಈ ಮಕ್ಕಳಿಗಾಗಿ ಏನಾದರೂ ಮಾಡಲೇಬೇಕು. ಮನೆ ಮನೆಗೆ ಹೋಗಿ ಪಾಠ ಮಾಡಲು ಸಾಧ್ಯವಿಲ್ಲ. ಮಕ್ಕಳ ಸಂಖ್ಯೆ 242 ಇತ್ತು. ಏನು ಮಾಡಬೇಕು ಮಕ್ಕಳ ಮನೆಯ ಹತ್ತಿರ ಸ್ವಲ್ಪ ಮಕ್ಕಳನ್ನು ಸೇರಿಸಿ ಅವರಿಗೆ ಹೋಂ ವರ್ಕ್ ಕೊಟ್ಟರೆ ಹೇಗೆ ? ಇಲ್ಲಾ ಗುಡಿ ಗುಂಡಾರಗಳಲ್ಲಿ ಸ್ಥಳ ಸ್ವಚ್ಛ ಮಾಡಿಕೊಂಡು ಮಕ್ಕಳನ್ನು ದೂರ ದೂರ ಕೂಡಿಸಿ ಅಕ್ಷರಾಭ್ಯಾಸ ಮಾಡಿದರೆ ಹೇಗೆ ಎಂಬ ಚರ್ಚೆಯಲ್ಲಿರುವಾಗ, ಇದೇ ಸಮಯದಲ್ಲಿ ಅಪರ ಆಯುಕ್ತಾಲಯದಲ್ಲಿ ಹಿರಿಯ ನಿರ್ದೇಶಕರಾದಂತಹ ಶ್ರೀ ಸಿ.ಎಸ್ ಮುಧೋಳ ಸರ್, ವಿಷಯ ಪರೀವೀಕ್ಷಕರಾದ ಶ್ರೀ ನಾಗೇಂದ್ರಪ್ಪ ಅವರಾದಿ ಸರ್ ಅವರ ಸಲಹೆ ಹಾಗೂ ಮಾರ್ಗದರ್ಶನ ಕೇಳಲಾಯಿತು. ಮುಧೋಳ ಸರ್ ಒಳ್ಳೆಯ ಕೆಲಸಕ್ಕೆ ಜಯ ಇದ್ದೇ ಇರುತ್ತದೆ ನೀವು ಮನಸ್ಸು ಮಾಡಿದರೆ ಆಗುತ್ತದೆ. ಎಸ್ ಡಿ ಎಂ ಸಿ ಸಹಕಾರ ಹಾಗೂ ಪಾಲಕರನ್ನು ಭೇಟಿ ಮಾಡಿ ಅವರ ಅಭಿಪ್ರಾಯದ ಮೇಲೆ ಮುಂದುವರೆಯಿರಿ. ನಿಮಗೆ ನೈತಿಕವಾಗಿ ನಮ್ಮ ಬೆಂಲವಿದೆ ಆದರೆ ಯಾವುದೇ ಕಾರಣಕ್ಕೂ ಮಕ್ಕಳ ಗುಂಪು ಗೂಡಬಾರದು. ಅಂತರ ಕಾಯ್ದುಕೊಳ್ಳುವುದು ಕಡ್ಡಾಯ ಎಂದು ಮಾರ್ಗದರ್ಶನ ಮಾಡಿದರು. ಯಾವುದೇ ಕಾರಣಕ್ಕೂ ಮಕ್ಕಳ ಕಲಿಕೆ ಕಡಿತವಾಗಬಾರದು. ಇದನ್ನು ಗಮನಿಸಿ, ನಮ್ಮ ಸಿಬ್ಬಂದಿಯವರೊಂದಿಗೆ ಚರ್ಚಿಸಿ ಎಸ್ಡಿಎಂಸಿ ಹಾಗೂ ಪಾಲಕ-ಪೋಷಕರನ್ನು ಭೇಟಿ ಮಾಡಿ ಸರ್ಕಾರದ ಆದೇಶದ ಪ್ರಕಾರ ಶಾಲಾ ತರಗತಿಗಳನ್ನು ತೆರೆಯುವಂತಿಲ್ಲ, ಆದರೆ ನಾವು ನಿಮ್ಮ ಮನೆಯಂಗಳಕ್ಕೆ ಬಂದು ಮಕ್ಕಳಿಗೆ ಬೋಧನೆ ಮಾಡುತ್ತೇವೆ ಎಂದು ಅವರ ಮನವೊಲಿಸಿದೇವು. ಪಾಲಕರು ಬಹಳ ಖುಷಿಪಟ್ಟರು ಮಕ್ಕಳು ದಿನಾ ರೋಡ ಮೇಲೆ ಆಟ ಆಡುತ್ತಾರೆ. ಟಿ.ವಿ ನೋಡಿದೆ ಹಾಳಾಗುತ್ತಿದ್ದಾರೆ. ಓದು ಇಲ್ಲ ಬರೆಯೋದು ಇಲ್ಲಾ ನೀವು ಶಾಲೆ ಪ್ರಾರಂಭ ಮಾಡಿ ನಿಮಗೆ ಬೇಕಾದ ಸಹಕಾರ ನಾವು ನೀಡ್ತೀವಿ ಅಂಥಾ ಹುರಿದುಂಬಿಸಿದರು. ಈ ವಿಷಯ ಕೇಳಿ ನಮ್ಮ ಹಿಂದಿನ ಮಾನ್ಯ ಆಯುಕ್ತರಾಗಿದ್ದ ಶ್ರೀ ನಳಿನಿ ಅತುಲ್ ಸಾಹೇಬರು ಮೆಚ್ಚುಗೆ ವ್ಯಕ್ತಪಡಿಸಿದರು. ಅದೇ ರೀತಿ ಇಂದಿನ ಮಾನ್ಯ ಡಿಡಿಪಿಐ ಆಗಿರುವ ಶ್ರೀ ಸಕ್ರೆಪ್ಪಗೌಡ ಸರ್ ರವರ ಮಾರ್ಗದರ್ಶನ ಕೂಡಾ ನಾವು ಪಡೆದಿದ್ದೆವು. ನಂತರ ನಮ್ಮ ಈ ಕಾರ್ಯ ರಾಜ್ಯದ ಎಲ್ಲಾ ಕಡೆ ಹಬ್ಬಿತು. ಕಲಬುರಗಿ ಜಿಲ್ಲೆಯ ಡಯಟ್ ಕಮಲಾಪೂರದ ಉಪ ನಿರ್ದೇಶಕರು ಹಾಗೂ ಉಪನ್ಯಾಸಕರು ಭೇಟಿ ಮಾಡಿ ನಮಗೆ ಮಾರ್ಗದರ್ಶನ ಮಾಡಲು ಪ್ರಾರಂಭ ಮಾಡಿದರು. ಇದರಿಂದಾಗಿ ಮಂದಿರ, ಮಸೀದಿ ಹಾಗೂ ಸಮುದಾಯ ಭವನಗಳಲ್ಲಿ ಆಯಾ ವಠಾರದ

10:20 ಮಕ್ಕಳನ್ನು ಸೇರಿಸಿಕೊಂಡು 8 ಕೇಂದ್ರಗಳನ್ನಾಗಿ ಮಾಡಿ ಅವರಿಗೆ ಅಕ್ಷರಾಭ್ಯಾಸವನ್ನು ಮಾಡಿಸಲು ಪ್ರಾರಂಭ ಮಾಡಿದೆವು. ಇದರಿಂದ ಮಕ್ಕಳು ಹಾಗೂ ಶಾಲೆಯ ಸಂಬಂಧದ ಕೊಂಡಿ ಕಳಚಿ ಹೋಗದಂತೆ ನೋಡಿಕೊಳ್ಳುತ್ತಿದ್ದೇವೆ.

ಈ ಕಾರ್ಯಕ್ಕಾಗಿ ಮಾನ್ಯ ಶಿಕ್ಷಣ ಸಚಿವರಾದ ಶ್ರೀ ಸುರೇಶಕುಮಾರ ರವರು ಕರೆ ಮಾಡಿ ಅಭಿನಂದಿಸಿದ್ದಾರೆ. ನಮ್ಮನ್ನು ಅನುಸರಿಸಿ ಈಗ ಕಲಬುರ್ಗಿ ಉತ್ತರ ವಲಯದ ಕೆಲವು ಸರಕಾರಿ ಶಾಲೆಗಳು ವಠಾರದತ್ತ ಶಾಲೆ ಮಾಡಿದರು.

ಮುಖ್ಯಗುರುಗಳು/ಶಿಕ್ಷಕ ವೃಂದ
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ
ಒಕಳಿ ಕಲಬುರಗಿ ಉತ್ತರ



